ಕರ್ನಾಟಕ ವಿಧಾನ ಮಂಡಲ

ಬೆಳಗಾವಿ ಅಧಿವೇಶನ

ಗುರುವಾರ, 28ನೇ ಸೆಪ್ಟೆಂಬರ್ 2006ರಂದು

ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತು ಸದಸ್ಯರು

ಬೆಳಗಾವಿಯ ಜವಹರಲಾಲ್ ನೆಹರು ವೈದ್ಯಕೀಯ ವಿದ್ಯಾಲಯ

ಆವರಣದಲ್ಲಿರುವ ಡಾ:ಬಿ.ಎಸ್.ಜೀರಿಗೆ ಸಭಾಂಗಣದಲ್ಲಿ

ಬೆಳಿಗ್ಗೆ 11.00 ಗಂಟೆಗೆ ಉಪಸ್ಥಿತರಿದ್ದರು.

ದಿನಾಂಕ 28ನೇ ಸೆಪ್ಟೆಂಬರ್ 2006, ಗುರುವಾರದಂದು

ಸುವರ್ಣ ಕರ್ನಾಟಕದ ನೆನಪಿಗಾಗಿ ಬೆಳಗಾವಿಯಲ್ಲಿ ನಡೆಸಿದ

ರಾಜ್ಯ ವಿಧಾನ ಮಂಡಲದ ಅಧಿವೇಶನದ ಸಂದರ್ಭದಲ್ಲಿ

ಕರ್ನಾಟಕದ ಘನತೆವೆತ್ತ ರಾಜ್ಯಪಾಲರು

ಭಾಷಣ ಮಾಡಿದ ಸಭೆಯ ನಡವಳಿಕೆಗಳು.

ಘನತೆವೆತ್ತ ರಾಜ್ಯಪಾಲರು ಬೆಳಿಗ್ಗೆ 11ಕ್ಕೆ ಬೆಳಗಾವಿಯ ಜವಹರಲಾಲ್ ನೆಹರು ವೈದ್ಯಕೀಯ ವಿದ್ಯಾಲಯದ ಡಾ. ಬಿ.ಎಸ್.ಜೀರಿಗೆ ಸಭಾಂಗಣಕ್ಕೆ ಆಗಮಿಸಿದರು. ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮಾನ್ಯ ಸಭಾಪತಿಗಳು, ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರುಗಳು ಮಾನ್ಯ ರಾಜ್ಯಪಾಲರನ್ನು ಸಭಾಂಗಣಕ್ಕೆ ಸ್ವಾಗತಿಸಿದರು.

ಬೆಳಿಗ್ಗೆ 11.03ಕ್ಕೆ ರಾಷ್ಟ್ರಗೀತೆಯನ್ನು ನುಡಿಸಲಾಯಿತು.

ಬೆಳಿಗ್ಗೆ 11.07ಕ್ಕೆ ಧಾರವಾಡ ವಿಶ್ವವಿದ್ಯಾಲಯದ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ನಾಡಗೀತೆ ಜೈ ಭಾರತ ಜನನಿಯ ತನುಜಾತೆ ಹಾಡಲಾಯಿತು.

ಬೆಳಿಗ್ಗೆ 11.12ಕ್ಕೆ ಉದಯವಾಗಲಿ ನಮ್ಮ ಚಲುವ ಕನ್ನಡನಾಡು ಗೀತೆಯನ್ನು ಬೆಳಗಾವಿಯ ಶ್ರೀಮತಿ ಮಂಜುಳ ಜೋಷಿ ಮತ್ತು ತಂಡದಿಂದ ಹಾಡಲಾಯಿತು.

ಬೆಳಿಗ್ಗೆ 11.20ಕ್ಕೆ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಬೆಳಗಾವಿಯ ಕವಿ ಶ್ರೀ ಡಿ.ಎಸ್.ಕರ್ಕಿ ಯವರ ಹಚ್ಚೇವು ಕನ್ನಡದ ದೀಪ ಹಾಡಲಾಯಿತು.

ಬೆಳಿಗ್ಗೆ 24ಕ್ಕೆ ಶ್ರೀ ಬಸ್ಲಿಂಗಯ್ಯ ಹಿರೇಮಠ ಮತ್ತು ತಂಡದವರಿಂದ ವೀರರಾಣಿ ಕಿತ್ತೂರು ಚನ್ನಮ್ಮ ಹಾಗೂ ಆಕೆಯ ಬಲಗೈ ಬಂಟ ಸಂಗೊಳ್ಳಿ ರಾಯಣ್ಣನ ಕುರಿತು ಲಾವಣಿ ಹಾಡಲಾಯಿತು.

ಸ್ವಾಗತ ಭಾಷಣ

ಸನ್ಮಾನ್ಯ ಸಭಾಧ್ಯಕ್ಷರು; ವಿಧಾನಸಭೆ:

ಮಾನ್ಯರೇ,

ಕನ್ನಡ ನಾಡಿಗೆ ಈಗ ಸುವರ್ಣ ವರ್ಷದ ಸಂಭ್ರಮ. 1956ನೇ ಇಸವಿ ನವೆಂಬರ್ 1 ರಂದು ಹರಿದು ಹಂಚಿ ಹೋಗಿದ್ದ ಕನ್ನಡಿಗರು ಕೊನೆಗೂ ಒಂದೇ ಸೂರಿನಡಿ ಕನ್ನಡದ ಹೆಸರಿನಲ್ಲಿ ತನ್ನದೇ ಆದ ನೆಲೆ, ನೆಲ ಕಂಡುಕೊಂಡರು. ಆದರೆ 'ಕರ್ನಾಟಕ' ಎಂದೇ ಈ ನಾಡಿಗೆ ನಾಮಕರಣವಾಗಬೇಕೆಂಬುದು ಕನ್ನಡಿಗರ ಬಹುದಿನಗಳ ಕನಸಾಗಿತ್ತು. **1973ರಲ್ಲಿ** ದಿವಂಗತ ಶ್ರೀ ದೇವರಾಜ ಅರಸ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ವಿಶಾಲ **ಮೈಸೂರು 'ಕರ್ನಾಟಕ'ವೆಂದು ಸಂವಿಧಾನಬದ್ಧವಾಗಿ ಅಧಿಕೃತವಾಗಿ ನಾಮಾಂಕಿತಗೊಂಡು ಈ ಕನಸು ನನಸಾಯಿತು.** ಸಮಸ್ತ ಕನ್ನಡಿಗರ ತನು, ಮನ ಪುಳಕಗೊಂಡಿತು. ಕನ್ನಡ ತಾಯಿ ಭುವನೇಶ್ವರಿಯ ಕೃಪಾಕಟಾಕ್ಷದಿಂದ 50ನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ದಿನಾಂಕ. 20.11.2005ರಂದು ಎರಡು ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ, ಗೌರವಾನ್ವಿತ ರಾಷ್ಟ್ರಪತಿಗಳು ಸಂದೇಶ ನೀಡಿದ್ದು, ಆ ಸಮಯದಲ್ಲಿ ತಾವು ಉಪಸ್ಥಿತರಿದ್ದಿರಿ ಎಂಬುದನ್ನು ಸ್ಮರಿಸುತ್ತಾ, ಕರ್ನಾಟಕ ಏಕೀಕರಣಗೊಂಡು **50 ಸಾರ್ಥಕ ವರ್ಷಗಳನ್ನು** ಪೂರೈಸುತ್ತಿರುವ ಈ ಶುಭ ಘಳಿಗೆಯಲ್ಲಿ ಘನತೆವೆತ್ತ ರಾಜ್ಯಪಾಲರು ಈ ಬೆಳಗಾವಿ ಅಧಿವೇಶನದಲ್ಲಿ ಉಭಯ ಸದನಗಳ ಮಾನ್ಯ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡುತ್ತಿರುವುದು ಒಂದು ಯೋಗಾನುಯೋಗ. ಇದು ನಮ್ಮೆಲ್ಲರ ಸೌಭಾಗ್ಯವೂ ಹೌದು.

ಕರ್ನಾಟಕದ ಇತಿಹಾಸದಲ್ಲಿ ಬೆಳಗಾವಿಯಲ್ಲಿ ನಡೆಯುತ್ತಿರುವ ಈ ಅಧಿವೇಶನವು ಸುವರ್ಣ ಪುಟದ ಮಹತ್ವದ ಅಧ್ಯಾಯ. ಇದೇ ಪ್ರಥಮ ಬಾರಿಗೆ ವಿಧಾನ ಸೌಧದ ವಿಧಾನ ಮಂಡಲದ ಸಭಾಂಗಣದಿಂದ ಹೊರಬಂದು ರಾಜಧಾನಿಯೇತರ ನಗರದಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯುತ್ತಿದೆ. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ದಿಸೆಯಲ್ಲಿ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸುತ್ತಿರುವುದು ಒಂದು ಐತಿಹಾಸಿಕ ಮಹತ್ವದ ಸಂದರ್ಭ